ಹಾಂ, ಆ ಕುಣಿತ ಕವಿಯದೂ ಹೌದು. ತನ್ನ ನೆಚ್ಚಿನ ಮಾಸವನ್ನು ಎಷ್ಟು ಬಣ್ಣಿಸಿದರೂ ಕವಿಗೆ ದಣಿವಿಲ್ಲ.

ಅಂದಹಾಗೆ, ಬೇಂದ್ರೆಯವರಿಗೆ ಶ್ರಾವಣದ ಈ ಮೋಹವಾದರೂ ಏಕೆ? ಅದಕ್ಕೆ ಕಾರಣ ಕವನದಲ್ಲೇ ಇದೆ. 'ಜಗದ್ಗುರು ಹುಟ್ಟಿದ ಮಾಸ / ಕಟ್ಟಿ ನೂರು ವೇಷ / ಕೊಟ್ಟ ಸಂತೋಷ' ಎನ್ನುವ ಸಾಲುಗಳಲ್ಲಿನ ಗುರುದೇವ ಕೃಷ್ಣ ಪರಮಾತ್ಮ, ಗೀತಾಚಾರ್ಯ ಮಾತ್ರವಲ್ಲ, ಶ್ರಾವಣದಲ್ಲಿ ಹುಟ್ಟಿದ ಅರವಿಂದರು ಕೂಡ ಬೇಂದ್ರೆಯವರ ಪಾಲಿಗೆ ಗುರುದೇವನೇ. ಈ ಇಬ್ಬರು ಗುರುಗಳ ಜನ್ಮಮಾಸವಾದ ಕಾರಣದಿಂದ ಕೂಡ ಬೇಂದ್ರೆಯವರಿಗೆ ಶ್ರಾವಣದ ಬಗ್ಗೆ ಇನ್ನಿಲ್ಲದ ಅಕ್ಕರಾಸ್ಥೆ. (ಅರವಿಂದರು ಹುಟ್ಟಿದ್ದು ಕೂಡ ಆಗಸ್ಟ್ 15ರಂದೇ! ಶ್ರಾವಣಕ್ಕೆ, ಸ್ವಾತಂತ್ರ್ಯಕ್ಕೆ ಎಷ್ಟೊಂದು ಬಣ್ಣಗಳಲ್ಲವೇ?) ಬೇಂದ್ರೆಯವರಂತೆ ಅವರ ಗೆಳೆಯ ಮಧುರಚೆನ್ನರಿಗೂ ಅರವಿಂದರ ಬಗ್ಗೆ ಆಕರ್ಷಣೆ. ಈ ಇಬ್ಬರೂ ಗೆಳೆಯರು ತಮ್ಮ ಕಾರ್ಯವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿ 'ಅರವಿಂದ ಭಜನಾ ಮಂಡಳಿ'ಗಳನ್ನು ಸ್ಥಾಪಿಸಿದ್ದರು. ಅವುಗಳಲ್ಲಿ ಕೆಲವು ಭಜನಾ ಮಂಡಳಿಗಳೂ ಈಗಲೂ ಕ್ರಿಯಾಶೀಲವಾಗಿವೆ.

ಕನ್ನಡದ ಮತ್ತೊಬ್ಬ ಮೇರುಕವಿ ಕುವೆಂಪು ಅವರಿಗೂ ಶ್ರಾವಣ ಅಚ್ಚುಮೆಚ್ಚು. ಹೇಳಿಕೇಳಿ ಕುವೆಂಪು ಪ್ರಕೃತಿಯ ಉಪಾಸಕರು. ಆ ಪ್ರಕೃತಿಪ್ರೀತಿ 'ಶ್ರಾವಣ ಸಂಧ್ಯಾಸಮೀರಣ' ಕವಿತೆಯಲ್ಲೂ ಅಭಿವ್ಯಕ್ತಗೊಂಡಿದೆ. 'ಶ್ರಾವಣ ಸಂಧ್ಯಾ ಸಮಯ ಸಮೀರನು / ಆಮಂದಗಮನದಿ ಬರುತಿಹನು / ಸುಯ್ಯನೆ ಬೀಸಿ ಬರುತಿಹನು! / ಪಡುಗಡಲಿನ ಪೆರ್ದೆರೆಗಳ ಗುಡಿಯಲಿ / ತುಂತುರುವನಿಗಳ ಕೂಡಾಡಿ, / ಬೆಳ್ನೊರೆಯುರುಳಿಯ ಚೆಲ್ಲಾಡಿ / ಜಲನಿಧಿ ಘೋಷದಿ ಬರುತಿಹನು / ಕಡಲಿನ ವಾರ್ತೆಯ ತರುತಿಹನು!' ಎನ್ನುತ್ತಾರೆ ಕುವೆಂಪು.

ಶ್ರಾವಣಕ್ಕೆ ಸಾಂಸ್ಕೃತಿಕ ಆಯಾಮವೂ ಇದೆ.



ಚಿತ್ರ: ದಿನೇಶ್ ಮಾನೀರ್



## ಕಾವ್ಯ-ಕಲೆಗೆ 'ಶ್ರಾವಣ ಕುಂಚ'

–ಬಿ.ಕೆ.ಎಸ್. ವರ್ಮ, ಚಿತ್ರ ಕಲಾವಿದರು

ಶ್ರಾವಣ ಎನ್ನುವುದು ಮಾಂತ್ರಿಕ ಇದ್ದಂತೆ. ಪ್ರಕೃತಿಯಲ್ಲಿ ಹೊಸ ಬದಲಾವಣೆ ಮತ್ತು ಚಿತ್ತಾರಗಳನ್ನು ಮೂಡಿಸುತ್ತದೆ. ನನ್ನಂತಹ ಕಲಾವಿದರಿಗೆ ಶ್ರಾವಣದಲ್ಲಿ ಪ್ರಮುಖವಾಗಿ ಕಾಣುವುದು ಮಳೆಯೇ.

ಒಂದೊಂದು ಮಳೆ ಮೋಡಗಳಿಗೂ ಒಂದೊಂದು ಆಕಾರ. ಆನೆ, ಜಿಂಕೆ ಇತ್ಯಾದಿ ರೂಪ. ಮಳೆಯ ಕಾರಣದಿಂದ ಜಲಪಾತಗಳು, ನದಿಗಳು ಝರಿಗಳು ರುದ್ರ ರಮಣೀಯವಾಗುತ್ತದೆ. ಹೀಗೆ ಶ್ರಾವಣದಲ್ಲಿ ಕಾವ್ಯ ಮತ್ತು ಕಲೆ ಎರಡೂ ಒಂದೇ ಆಗಿ ಕಾಣುತ್ತದೆ. ಶ್ರಾವಣ ಮಾಸ ಒಂದು ರೀತಿಯಲ್ಲಿ ಮುದ ಕೊಡುವ ಕಾಲ.

ನಾವು ಚಿಕ್ಕವರಿದ್ದಾಗ ಶ್ರಾವಣದ ಮಳೆಗಾಲದಲ್ಲಿ ಮನಸ್ಸು ಬಿಚ್ಚಿ ಕುಣಿಯುತ್ತಿದ್ದೆವು. ಆಗ ಕೊಡೆಗಳ ಬದಲಿಗೆ ಚಿತ್ರ ಬರೆಯಲು ಇದ್ದ ಬೋರ್ಡ್‌ಗಳನ್ನೇ ಕೊಡೆಯ ರೀತಿ ಬಳಸುತ್ತಿದ್ದೆವು. ಅವುಗಳನ್ನು ಕೊಡೆಯಂತೆ ಹಿಡಿದು ನೃತ್ಯ ಮಾಡುತ್ತಿದ್ದೆವು.

ಎಲ್ಲಿ ನೋಡಿದರೂ ಕಪ್ಪೆಗಳು ವಟಗುಡುತ್ತಿದ್ದವು, ಮಳೆಯ ಸದ್ದು, ಮಣ್ಣಿನ ವಾಸನೆ... ಅದೊಂದು ರೀತಿಯ ಹಬ್ಬ. ಮಳೆ ಹನಿಗಳು ಬೇರೆ ಬೇರೆಯಾಗಿ ಬಿದ್ದು ಎಲ್ಲವೂ ಒಂದೆಡೆ ಸೇರುತ್ತದೆ. ಇದು ಮನುಷ್ಯನ ಬದುಕಿನ ಸಹಬಾಳ್ವೆ ತೋರುತ್ತದೆ.

ಶ್ರಾವಣ ಮಾಸ ಮಳೆಯ ಸುಗ್ಗಿ! ಆ ಸುಗ್ಗಿ ತನ್ನ ಹಬ್ಬವನ್ನು ತಾನೇ ಆಚರಿಸಿಕೊಳ್ಳುತ್ತದೆ. ಪ್ರಕೃತಿಯಲ್ಲಿ ಬದಲಾವಣೆಗಳು ಆಗುತ್ತಿರುತ್ತದೆ. ಸಿಡಿಲು ಮತ್ತು ಗುಡುಗು ಈ ಹಬ್ಬಕ್ಕೆ ಪಟಾಕಿಯನ್ನು ಹಚ್ಚಿದಂತೆ. ಹೀಗೆ ಪ್ರತಿಯೊಬ್ಬರಿಗೂ ಶ್ರಾವಣ ಮಾಸವು ನಾನಾ ಬಗೆಯಲ್ಲಿ ದಕ್ಕುತ್ತದೆ.

ಶ್ರಾವಣ ಮಾಸದ ಗಾಳಿ, ಮಳೆ ಸಂಗೀತ–ನೃತ್ಯದ ಉನ್ಮಾದದಂತೆ ನನಗೆ ಕಾಣುತ್ತದೆ. ಸಕಲ ಜೀವಿಗಳಿಗೂ ನೀರೇ ಆಸರೆ. ಒಂದು ಸಸಿ ಚಿಗುರಲು ನೀರು ಬೇಕು. ನೀರಿಲ್ಲದೆ ಬದುಕಲು ಸಾಧ್ಯವಿಲ್ಲ. ಇಂತಹ ಜೀವ ಚೈತನ್ಯವಾದ ನೀರನ್ನು ಧರೆಗೆ ಇಳಿಸುವ ಮಹೋನ್ನತವಾದ ಗಳಿಗೆ ಶ್ರಾವಣ.